# ಇಎಕ್ಸ್ 110 ಸೂಪರ್ ಸಿರೀಸ್ ಬಿಡುಗಡೆ

ಧಾರವಾಡ: ಟಾಟಾ ಹಿಟಾಚಿ ಕನಸ್ಟ್ರಕ್ಷನ್ ಮೆಷಿನರಿ ಕಂಪನಿ ಪ್ರೈವೇಟ್ ಲಿಮಿಟೆಡ್ ಧಾರವಾಡದಲ್ಲಿರುವ ತನ್ನ ತಯಾರಿಕಾ ಘಟಕದಲ್ಲಿ ನೂತನ ಇಎಕ್ಸ್ 110 ಸೂಪರ್ ಸಿರೀಸ್ ಹೈಡ್ರಾಲಿಕ್ ಎಕ್ಸ್ ಕವೇಟರ್ ಉತ್ಪಾದನೆ ಆರಂಭಿಸಿದ್ದು, ಸೋಮವಾರ ಮಾರುಕಟ್ಟೆಗೆ ಬಿಡುಗಡೆಗೊಳಿಸಲಾಯಿತು.

ಇಎಕ್ಸ್ 110 ವಿನೂತನ ಬದಲಾಣೆಗೆ ಹೊಂದಿಕೊಳ್ಳುವಂತಹುದಾಗಿದೆ. ಕಡಿಮೆ ವೆಚ್ಚದಲ್ಲಿ ಪರಿಣಾಮಕಾರಿ ಕೆಲಸ ನಿರ್ವಹಿಸುತ್ತದೆ. ಈ ಹಿಟಾಚಿಯ ಮೂಲ ಆಪ್ಟಿಮಮ್ ಹೈಡ್ರಾಲಿಕ್ ಸಿಸ್ಟ್, ಆಧುನಿಕ ಅಂಶಗಳಾದ ಫ್ಯೂಯಲ್ ಸೇವಿಂಗ್ ಪಂಪ್ ಸಿಸ್ಟಮ್ ಮತ್ತು ಕ್ರಾಸ್-ಸೆನ್ಸಿಂಗ್ ಸಮೇಷನ್ ಸಿಸ್ಟಂ ಹೊಂದಿದ್ದು ವೇಗವಾಗಿ ಕೆಲಸ ಮಾಡುವುದಕ್ಕೆ ನೆರವಾಗುತ್ತದೆ.

ವಿಶ್ವದರ್ಜೆಯ ವಿನ್ಯಾಸ, ಸಂಶೋಧನೆ ಮತ್ತು ಅಭಿವೃದ್ಧಿ ಘಟಕ ಅನೇಕ ವಿನೂತನಗಳನ್ನು ಒದಗಿಸಿದೆ. ಸೂಪರ್ ಸ್ಪೋರ್ಟ್ಸ್ ಕ್ಯಾಬಿನ್ ಆಪರೇಟರ್, ಆರಾಮವಾಗಿ ಹೆಚ್ಚು ಕ್ಷಮತೆಯಿಂದ ಕೆಲಸ ಮಾಡುವುದಕ್ಕೆ ನೆರವಾಗುತ್ತದೆ.




ಟಾಟಾ 697ಎನ್ಎ ಇಂಜಿನ್ ಮತ್ತು ನೂತನ ಪವರ್ ಮೋಡ್ ಸೆಲೆಕ್ಷನ್ ಅಂಶ ಹೊಂದಿದೆ. ಇಂಜಿನ್ ವೇಗದಲ್ಲಿ ಆಗುವ ಬದಲಾವಣೆ ಗ್ರಹಿಸಿ ಕಾರ್ಯ ನಿರ್ವಹಿಸುತ್ತದೆ. ಆಟೋ ಐಡಲ್ ಮತ್ತು ಐಫಾಲ್ಸ್ ಆಟೊ ಡಿಸೆಲೆರೇಷನ್ ಹೊಂದಿದೆ. ಇದರಿಂದ ಇಂಧನ ಉಳಿಕೆ ಹೆಚ್ಚಾಗುತ್ತದೆ. ಆ ಮೂಲಕ ಗ್ರಾಹಕರಿಗೆ ತಗಲುವ ವೆಚ್ಚ ಸಹ ಕಡಿಮೆ ಆಗುತ್ತದೆ ಎಂದು ಕಂಪನಿ ಪ್ರಕಟಣೆ ತಿಳಿಸಿದೆ.